ಅ) ಇದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು ನಿಯಮಾನುಸಾರ ಕಟ್ಟಡ ನಿರ್ಮಾಣಕ್ಕೆ ಉಚಿತ ನಿವೇಶನವನ್ನು ಗ್ರಾಮ ಪಂಚಾಯತಿ ವತಿಯಿಂದ ನೀಡಿದ್ದಲ್ಲಿ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾ ಪಂಚಾಯತ್ ಅವಶ್ಯ ಆಯವ್ಯಯವನ್ನು ಒದಗಿಸಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಬಿ.ಇ. ಕಾಲೇಜುಗಳಲ್ಲಿನ ಸೀಟ್‌ಗಳ ವಿವರ

981 (1301) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಬಿ.ಇ., (ಬ್ಯಾಚುಲರ್ಸ್ ಆಫ್ ಇಂಜಿನಿಯರಿಂಗ್) ಕಾಲೇಜುಗಳು ಇರುತ್ತವೆ; ಅವುಗಳಲ್ಲಿ ಖಾಸಗಿ ಅನುದಾನಿತ ಕಾಲೇಜುಗಳೆಷ್ಟು; ಹಾಗೂ ಸರ್ಕಾರಿ ಕಾಲೇಜುಗಳೆಷ್ಟು; (ಜಿಲ್ಲಾವಾರು ಕಾಲೇಜಿನ ಹೆಸರು ಹಾಗೂ ಖಾಸಗಿ ಸಂಸ್ಥೆ ಹೆಸರು, ವಿಳಾಸ ತಿಳಿಸುವುದು)

ಆ) ರಾಜ್ಯದಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಸೀಟ್‌ಗಳು ಯಾವ ಯಾವ ಕಾಲೇಜಿನಲ್ಲಿ ಖಾಲಿ ಇರುತ್ತವೆ; (ಕಾಲೇಜಿನ ಹೆಸರು, ಸಂಸ್ಥೆಯ ಹೆಸರು ತಿಳಿಸುವುದು)

ಇ) ಖಾಲಿ ಇರುವ ಸೀಟ್‌ಗಳನ್ನು ತುಂಬಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು, ಹಾಗೂ ಕ್ರಮ ಕೈಗೊಂಡ ನಂತರ ಎಷ್ಟು ಸೀಟ್‌ಗಳು ಖಾಲಿ ಇವೆ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟಾರೆ 112 ಇಂಜಿನಿಯರಿಂಗ್ ಕಾಲೇಜುಗಳಿವೆ (ಐದು ಸಂಜೆ ಕಾಲೇಜುಗಳು ಸೇರಿ)

ಸರ್ಕಾರಿ ಕಾಲೇಜಗಳು	06
ಅನುದಾನಿತ ಕಾಲೇಜುಗಳು	11
ಖಾಸಗಿ ಕಾಲೇಜುಗಳು	95
ಒಟ್ಟು	112

(ಇಂಜಿನಿಯರಿಂಗ್ ಕಾಲೇಜುಗಳ ಪಟ್ಟಿ ಲಗತ್ತಿಸಲಾಗಿದೆ)

ಆ)1. 2001-02ನೇ ಸಾಲಿನಲ್ಲಿ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಂಡ ತರುವಾಯ 4230 ಸೀಟುಗಳು ಉಳಿದಿತ್ತು.

2. 2002-03ನೇ ಸಾಲಿನಲ್ಲಿ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ಪ್ರಕ್ರಿಯೆ ಪೂರ್ಣಗೊಂಡ ತರುವಾಯ ಒಟ್ಟಾರೆ 6100 ಸೀಟುಗಳು ಖಾಲಿ ಉಳಿದಿತ್ತು.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಭರ್ತಿಯಾಗದೇ ಉಳಿದ 6100 ಸೀಟುಗಳನ್ನು ನಿಯಮಾವಳಿಯ ಪ್ರಕಾರ ಆಡಳಿತ ಮಂಡಳಿಗೆ ಬಿಟ್ಟು ಕೊಡಲಾಗಿದೆ. ಆಡಳಿತ ಮಂಡಳಿಯವರು ತಮ್ಮ ಹಂತದಲ್ಲಿ ಪ್ರವೇಶಗಳನ್ನು ನೀಡಿದ ತರುವಾಯ 5801 ಸೀಟುಗಳು ಹಾಲಿ ಉಳಿಯಿತು.

ಕಡೂರು ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಮತ್ತು ಬೋಧಕ ವರ್ಗದ ಮಾಹಿತಿ

982 (305) ಶ್ರೀ ಕೃಷ್ಣಮೂರ್ತಿ ಕೆ.ಎಂ (ಕಡೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಡೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಯಾವ ಯಾವ ವಿಷಯಗಳ ಬೋಧನ ವಿಭಾಗಗಳು ಇರುತ್ತವೆ; ಪ್ರತಿ ವಿಭಾಗಗಳಿಂದಲೂ ಎಷ್ಟೆಷ್ಟು ವಿದ್ಯಾರ್ಥಿಗಳು ಇರುತ್ತಾರೆ; ಹಾಗೂ ಎಷ್ಟು ಬೋಧಕರಿರುತ್ತಾರೆ;

2) ವಿದ್ಯಾರ್ಥಿಗಳಿಗೆ ಅನುಗುಣವಾಗಿ ಕೊಠಡಿಗಳು ಇರುತ್ತವೆಯೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಬೋಧಕ ಕೊಠಡಿಗಳಿರುತ್ತವೆ;

3) ಕಟ್ಟಡ ನಿರ್ಮಾಣವನ್ನು ಯಾವಾಗ ಮಾಡಲಾಗಿದೆ ನಿರ್ಮಾಣಕ್ಕೆ ತಗುಲಿದ ವೆಚ್ಚವೆಷ್ಟು ಮಾಸ್ಟರ್ ಪ್ಲಾನಿನಂತೆ ಕಟ್ಟಡವನ್ನು ನಿರ್ಮಿಸಲಾಗಿದೆಯೇ?

4) ನಿರ್ಮಿಸಲಾಗದಿದ್ದಲ್ಲಿ ಕೊಠಡಿಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿಲ್ಲವೇ, ತೊಂದರೆಯಾಗಿದ್ದಲ್ಲಿ, ಸರಿಪಡಿಸಲು ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆಯೇ? (ವಿವರ ನೀಡುವುದು)?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

1) ಕಡೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ; ಬಿಎಸ್ಸಿ; ಬಿ.ಕಾಂ ವಿಷಯಗಳನ್ನು ಬೋಧಿಸಲಾಗುತ್ತಿದೆ. 2002-03ನೇ ಸಾಲಿಗೆ ಪ್ರತಿ ವಿಭಾಗದಲ್ಲೂ ಈ ಕೆಳಕಂಡಂತೆ ವಿದ್ಯಾರ್ಥಿಗಳಿರುತ್ತಾರೆ.

ಪ್ರಥಮ ಬಿ.ಎ.	284	ಪ್ರಥಮ ಬಿ.ಕಾಂ	20
ದ್ವಿತೀಯ ಬಿ.ಎ.	156	ದ್ವಿತೀಯ ಬಿ.ಕಾಂ	16
ತೃತೀಯ ಬಿ.ಎ.	109	ತೃತೀಯ ಬಿ.ಕಾಂ	15

ಪ್ರಥಮ ಬಿ.ಎಸ್ಸಿ 15

ಒಟ್ಟು 617 ವಿದ್ಯಾರ್ಥಿಗಳಿರುತ್ತಾರೆ

ಒಟ್ಟು 12 ಬೋಧಕರಿರುತ್ತಾರೆ.

2) ಪ್ರಸ್ತುತ ಕಾಲೇಜಿನ ತರಗತಿಗಳನ್ನು ಸ್ವಂತ ಕಟ್ಟಡದ 04 ಕೊಠಡಿಗಳಲ್ಲಿ ಪದವಿ ಪೂರ್ವ ಕಾಲೇಜಿನ 04 ಕೊಠಡಿಗಳಲ್ಲಿ ಹಾಗೂ ತಾಲ್ಲೂಕು ಕ್ರೀಡಾಂಗಣದಲ್ಲಿನ 04 ಕೊಠಡಿಗಳಲ್ಲಿ ನಡೆಸಲಾಗುತ್ತಿದೆ. ಒಟ್ಟು 12 ಬೋಧಕ ಕೊಠಡಿಗಳಿರುತ್ತದೆ.

3) ಲೋಕೋಪಯೋಗಿ ಇಲಾಖೆಯಿಂದ 2001-02ನೇ ಸಾಲಿನಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿ ಕಾಲೇಜಿನ ವಶಕ್ಕೆ ಹಸ್ತಾತರಿಸಿರುತ್ತಾರೆ. ನಿರ್ಮಾಣಕ್ಕೆ ತಗುಲಿದ ವೆಚ್ಚ ರೂ.30.04 ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ ಇಲಾಖೆಯು ತಯಾರಿಸಿದ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸಲಾಗಿದೆ. ಆದರೆ, ಮಾಸ್ಟರ್ ಪ್ಲಾನಿನಂತೆ ಕಟ್ಟಡವನ್ನು ಪೂರ್ಣವಾಗಿ ನಿರ್ಮಿಸಿರುವುದಿಲ್ಲ.

4) ಹೌದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸದರಿ ಕಾಲೇಜಿನ ಮೊದಲನೇ ಅಂತಸ್ತಿನ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಯವರು ತಯಾರಿಸಿದ ರೂ.24.50 ಲಕ್ಷಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ ತಯಾರಿಸಿ ಕಳುಹಿಸಿದ್ದಾರೆ, ಈ ಬಗ್ಗೆ ಮುಂದಿನ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಿಕೊಳ್ಳಲು ಪ್ರಯತ್ನಿಸಲಾಗುವುದು.

ರಾಜ್ಯದಲ್ಲಿ ಮಂಗನ ಕಾಯಿಲೆ ಹಾಗೂ ಇಲಿ ಜ್ವರ ನಿಯಂತ್ರಣ

984 (1430) ಶ್ರೀ ಕೃಷ್ಣಮೂರ್ತಿ ಕೆ.ಎಂ (ಕಡೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?